ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ 710/2024

ಪಿ ಡಬ್ಲ್ಯೂಃ 1

ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಗೀತಾ ತೆಗ್ಯಾಳ |
| ಗಂಡನ ಹೆಸರು | : | ಪ್ರಭಾಕರ |
| ವಯಸ್ಸು | : | 38 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : | ನವಲಗುಂದ |

ದಿನಾಂಕಃ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು 05-02-2024 ರಿಂದ 10-06-2024 ರ ವರೆಗೆ ರಾಣೇಬೆನ್ನೂರಿನಲ್ಲಿ ಅಬಕಾರಿ ಉಪಅಧಿಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕ 20-04-2024 ರಂದು 2024 ರ ಲೋಕಸಬಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಪ್ರಯುಕ್ತ ರಾಣೇಬೆನ್ನೂರು ವಲಯದ ರಾಣೇಬೆನ್ನೂರು ಪಟ್ಟಣದಲ್ಲಿ ಚಾ ಸಾ 4 ರವರೊಂದಿಗೆ ಕಚೇರಿಯ ದ್ವಿಚಕ್ರ ವಾಹನದಲ್ಲಿ ಗಸ್ತು ಮಾಡುತ್ತಿರುವಾಗ, ಬೆಳಗ್ಗೆ 11-10 ರ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮಧ್ಯ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ಆಧಾರದ ಮೇಲೆ ನಾನು ಮತ್ತು ಚಾ ಸಾ 4 ರವರು ಗುನ್ಹಾ ಜಾಗದಲ್ಲಿ ನಿಂತುಕೊಂಡು ರಸ್ತೆಗಾವಲು ಮಾಡುತ್ತಿದ್ದಾಗ ಬೆಳಗ್ಗೆ 11-15 ರ ಸಮಯಕ್ಕೆ ಅಲ್ಲಿಯೇ ಇದ್ದ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ನೋಟೀಸ್ ನೀಡಿರುತ್ತೇನೆ. ಸುಮಾರು 11-25 ರ ಸಮಯಕ್ಕೆ ಶೋಧಿಸಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ವರದಿಯನ್ನು ತಯಾರಿಸಿ, 11-30 ರ ಸಮಯಕ್ಕೆ ಆರೋಪಿಯು ತನ್ನ ಮೋಟಾರ್ ಸೈಕಲ್ ನಲ್ಲಿ ಗುನ್ಹಾ ಜಾಗಕ್ಕೆ ಬಂದಿರುತ್ತಾರೆ. ಆರೋಪಿಯ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಕರಕಪ್ಪ ತಂದೆ ಸಿದ್ದಪ್ಪ ಪೂಜಾರ ಎಂದು ತಿಳಿಸಿರುತ್ತಾನೆ.

3. ಸದರಿ ಮೋಟಾರ್ ಸೈಕಲ್ ನ ಟ್ಯಾಂಕ್ ಮೇಲೆ ಒಂದು ಚೀಲ ಇದ್ದು ವಿಚಾರಿಸಿದಾಗ ಆರೋಪಿಯು ತನ್ನ ಜೀವನೋಪಾಯಕ್ಕಾಗಿ ಮದ್ಯ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ನಂತರ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ

1. 90 ಮಿಲಿಯ 24 ಹೆಚ್ ಸಿ ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳು,
2. 90 ಮಿಲಿಯ 24 ಓ.ಸಿ. ವಿಸ್ಕಿಯ ಟೆಟ್ರಾ ಪ್ಯಾಕೆಟ್‌ಗಳು,

ಒಟ್ಟು 4.32 ಲೀಟರ್ ನಷ್ಟು ಮದ್ಯವನ್ನು ಹೊಂದಿದ್ದು, ಟೆಟ್ರಾ ಪ್ಯಾಕ್ ಗಳ ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ಸದರಿ ಮುದ್ದೆ ಮಾಲುಗಳನ್ನು ಕೆ.ಆರ್.ಬ್ಯಾಡಗಿ ಸಿ ಎಲ್ ಶಾಪ್ ನಿಂದ ತಂದಿರುವುದಾಗಿ ನುಡಿದಿರುತ್ತಾರೆ.

4. ವಾಹನವನ್ನು ಪರಿಶೀಲಿಸಿದಾಗ ಕಪ್ಪು ಮತ್ತು ಕೆಂಪು ಬಣ್ಣದ ಹೀರೋ ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-35/ಇಕೆ-5812 ಇದ್ದು, ವಾಹನ ಹಾಗೂ ದೊರೆತ ಮದ್ಯವನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಟೆಟ್ರಾ ಪ್ಯಾಕೆಟ್ ಗಳನ್ನು ಮಾದರಿ ಮದ್ಯವಾಗಿ ಪ್ರತ್ಯೇಕಿಸಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಸೀಲ್ ಮಾಡಿ ಸಂಖ್ಯೆ 566 ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 11-30 ರಿಂದ 12-30 ರ ವರೆಗೆ ಪಂಚನಾಮೆ ಜರುಗಿಸಿ ವರದಿ ಸಿದ್ದಪಡಿಸಿ, ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಆರೋಪಿಗೆ ಸಿ ಆರ್ ಪಿ ಸಿ ಕಲಂ 41(ಎ) ರೀತ್ಯಾ ನೋಟೀಸು ನೀಡಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಯಿತು.

5. ಸದರಿ ಅಮಾನತುಪಡಿಸಿಕೊಂಡ ಮದ್ಯ ಹಾಗೂ ವರದಿಯೊಂದಿಗೆ ಕಛೇರಿಗೆ ಬಂದು ಸ್ವ ದೂರು ಸಿದ್ದಪಡಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ, ಪ್ರ ವ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ **ಚಾ ಸಾ 5** ರವರಿಗೆ ವರ್ಗಾಯಿಸಿರುತ್ತೇನೆ.

6. ದಿನಾಂಕ 20-04-2024 ರ ಶೋಧನಾ ಸಮುಚಿತ ಆಧಾರವನ್ನು **ನಿಪಿ 1** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಎ** ಎಂದು, ಮಹಜರು ವರದಿಯನ್ನು **ನಿಪಿ 2** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 2 ಎ** ಎಂದು, ಸ್ವ ದೂರನ್ನು **ನಿಪಿ 3** ಎಂದು,

ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 3 ಎ** ಎಂದು, ಪ್ರ ವ ವರದಿಯನ್ನು **ನಿಪಿ 4** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 4 ಎ** ಎಂದು ಗುರುತಿಸಲಾಯಿತು. ಕಲಂ 41ಎ ಅಡಿಯಲ್ಲಿನ ನೋಟೀಸನ್ನು **ನಿಪಿ 5** ಎಂದು ಗುರುತಿಸಲಾಯಿತು. ಸ್ವತ್ತುಗಳ ಪಟ್ಟಿಯನ್ನು **ನಿಪಿ 6** ಎಂದು ಗುರುತಿಸಲಾಯಿತು. ಮಾದರಿ ಮದ್ಯವನ್ನು ಸಾಕ್ಷಿದಾರರು ನೋಡಿ ಗುರುತಿಸಿದ ಮೇರೆಗೆ ಒಟ್ಟಾಗಿ **ಮು.ಮಾ.1** ರಿಂದ **48** ಎಂದು ಮತ್ತು ಒಂದು ಚೀಲವನ್ನು **ಮು.ಮಾ.49** ಎಂದು ಗುರುತಿಸಲಾಯಿತು.

7. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಚುನಾವಣೆ ಇದ್ದ ಕಾರಣ ಮೇಲಧಿಕಾರಿಗಳು ನಮಗೆ ಪ್ರಕರಣಗಳನ್ನು ದಾಖಲಿಸಲು ಸೂಚನೆ ನೀಡಿದ್ದರು ಎಂದರೆ ಸರಿಯಲ್ಲ. ಮುದ್ದೆ ಮಾಲುಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಯಾವ ಅಂಗಡಿಯಲ್ಲಿ ಇಂಡೆಂಟ್ ಹಾಕಲಾಗಿದೆಯೋ ಆ ಅಂಗಡಿಗಳಲ್ಲಿ ಮಾತ್ರ ಸಿಗುತ್ತವೆ ಎಂದು ನುಡಿಯುತ್ತಾರೆ. ಮುದ್ದೆ ಮಾಲುಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ವಶಪಡಿಸಿಕೊಂಡ ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ಜೀವನ ನಿರ್ವಹಣೆಗೆ ಮದ್ಯ ಮಾರಾಟ ಮಾಡುತ್ತಿದ್ದನು ಎಂದು ಸುಳ್ಳು ಪಿರ್ಯಾದಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿ ಸಂಖ್ಯೆಯ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಯಾವುದೇ ದಾಳಿ ಮತ್ತು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರ ವಸ್ತುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.